ಶ್ವೇತಾಶ್ವವನ್ನೇರಿ ತನ್ನ ಕನಸಿನ ರಾಜಕುಮಾರನ ಬೆನ್ನು ಬಳಸಿ ವಿಹರಿಸುವ ಸಮಯ ಸನ್ನಿಹಿತವಾದಾಗ ತನ್ನನ್ನು ತಾನೇ ಎಚ್ಚರಿಸಿಕೊಂಡಳು ವೈಷ್ಣವಿ, 'ಹೆಜ್ಜೆ ಮುಂದಿಡುವ ಮುನ್ನ ಸಾವಿರ ಸಲ ಯೋಚಿಸು... ಸಾವಿರ ಸಲ ಯೋಚಿಸು...'

ಕೆಂದಾವರೆಯಂತೆ ಅರಳಿ ನಳನಳಿಸುವ ಮನದನ್ನೆಯ ಮುಖ ನೋಡಲು ಕಾತರಿಸಿ ಓಡಿ ಬಂದಿದ್ದ ಫಲ್ಗುಣನಿಗೆ ನಿರಾಶೆ ಕಾದಿತ್ತು. ಯಾವತ್ತಿನಂತಿಲ್ಲದೆ ವೈಷ್ಣವಿಯ ಮುಖದಲ್ಲಿ ಗಾಂಭೀರ್ಯ ಮನೆ ಮಾಡಿತ್ತು.

★★★

ವಾರಗಟ್ಟಲೆ ಯೋಚಿಸಿ ಎಚ್ಚರಿಕೆಯ ಮತ್ತೊಂದು ನಡೆ. ಫಲ್ಗುಣನ ಕಣ್ಣಲ್ಲಿ ಕಣ್ಣಿಟ್ಟು ಆಪ್ಯಾಯತೆಯಿಂದ ಕೇಳಿದಳು ವೈಷ್ಣವಿ,

"ನಾನು ಅಂದರೆ ನಿಮಗೆ ಅಷ್ಟೊಂದು ಪ್ರೀತಿ ಇದೆಯಾ ಫಲ್ಗುಣ? ವರ್ಷಾನುಗಟ್ಟಲೆ ಜೊತೆ ಕೊಟ್ಟ ಹೆಂಡತಿಯನ್ನು ತೊರೆದು ಬರುವಷ್ಟು?"

"ನನ್ನ ಪ್ರೀತಿಯ ಬಗ್ಗೆ ಇನ್ಯಾವ ರೀತೀಲಿ ಹೇಳಲಿ ವೈಷ್ಣವಿ? ನಿಮಗೋಸ್ಕರ ಈ ಪ್ರಪಂಚವನ್ನೇ ಧಿಕ್ಕರಿಸಿ ಬಂದ್ಬಿಡ್ತೀನಿ. ನಾವಿಬ್ರೂ ಹೊಸದೊಂದು ಬದುಕು ಕಟ್ಕೊಳ್ಳೋಣ. ಜೋಡಿ ಹಕ್ಕಿಗಳ ಥರ ಸುಖವಾಗಿರೋಣ."

"ಖಂಡಿತಾ?"

"ಖಂಡಿತಾ..."

"ಹಾಗಿದ್ರೆ ನಿಮ್ಮನ್ನ ನಂಬಿ ಉಟ್ಟ ಬಟ್ಟೆಯಲ್ಲಿ ನಿಮ್ಮ ಹಿಂದೆ ಬಂದ್ಬಿಡ್ತೀನಿ..."

"ಹಾ..." ಎನ್ನುವ ಹರ್ಷೋದ್ಗಾರದೊಡನೆ ಫಲ್ಗುಣ ತನ್ನ ಎದೆಯ ಮೇಲೆ ಕೈಯಿಟ್ಟುಕೊಂಡ, ಸಂತಸದ ಈ ಸುದ್ದಿಗೆ ತನ್ನ ಎದೆ ಎಲ್ಲಿ ಬಿರಿದುಬಿಡುತ್ತದೆಯೋ ಅನ್ನುವಂತೆ.

"ಆದ್ರೆ ಒಂದು ಕಂಡೀಷನ್..." ಅಂದಳು ವೈಷ್ಣವಿ.

"ಏನದು, ಬೇಗ ಹೇಳೀಪ್ಪಾ. ನೀವು ಏನು ಕೇಳಿದ್ರೂ ನಡೆಸಿಕೊಡೋದು ನನ್ನ ಜವಾಬ್ದಾರಿ..."

"ನಮ್ಮಪ್ಪ ದುಡಿದಿದ್ದರಲ್ಲಿ ಒಂದು ಕವಡೆ ಕಾಸನ್ನೂ ನಾನು ತರೋಳಲ್ಲ. ನೀವು ನನ್ನನ್ನ ಕೂದಲು ಕೊಂಕದ ಹಾಗೆ ನೋಡ್ಕೋತೀರಿ ಅನ್ನೋ ಭರವಸೆ ನಂಗಿದೆ..."

"ಅಪ್ಪನ ಒಬ್ಬಳೇ ಮಗಳಾಗಿ ಈ ಮಾತು ಹೇಳ್ಬಹುದಾ ನೀವು? ರಾಯರಿಗೆ ಬೇಜಾರಾಗಲ್ವಾ?" ಉಗುಳು ನುಂಗುತ್ತಾ ಸಮಜಾಯಿಷಿ ಕೇಳಿದ ಫಲ್ಗುಣ.

"ಆಸ್ತಿ ಆಸೆಗೆ ನೀವು ನನ್ನನ್ನ ಮದುವೆ ಮಾಡ್ಕೊಂಡ್ರಿ ಅನ್ನೋ ಕೆಟ್ಟ ಹೆಸರು ನಿಮಗೆ ಬೇಡ ಫಲ್ಗುಣ. ನನ್ನ ಮನಸ್ಸಲ್ಲೂ ಆ ಅನುಮಾನ ಉಳಿಯೋದು ಬೇಡ. ಅಪ್ಪನ ಆಸ್ತಿಗೆ ವಾರಸುದಾರರು ಬೇಕಾದಷ್ಟು ಜನ ಇದಾರೆ. ಅಪ್ಪನ ತಮ್ಮನ ಮಕ್ಕಳು, ತಂಗಿಯ ಮಕ್ಕಳು..."

"ತಮಾಷಿ ಮಾಡ್ತಿದೀರಾ?"

"ತಮಾಷಿ ಅಲ್ಲ, ಸತ್ಯ. ಈ ಕಂಡೀಷನ್‌ಗೆ ನೀವು ಒಪ್ಪೋದಾದ್ರೆ ಅಪ್ಪನ್ನ ಒಪ್ಪಿಸ್ತೀನಿ ನಾನು..."

ತನ್ನ ಜೀವಪಕ್ಷಿಯನ್ನು ವೈಷ್ಣವಿಯ ಎದೆಗೂಡಲ್ಲಿ ಬಚ್ಚಿಟ್ಟಿದ್ದೇನೆನ್ನುತ್ತಿದ್ದ ಫಲ್ಗುಣ ಮತ್ತೆ ಆ ಮನೆಯ ಕಡೆ ತಲೆ ಹಾಕಲಿಲ್ಲ.

★★★

ಹೀಗೊಂದು ಅನುಮಾನ ವೈಷ್ಣವಿಗೆ ಮೊದಲೇ ಬಂದಿರಲಿಲ್ಲವಾ? ಬಂದಿತ್ತು. ಭಾವ ಬುದ್ಧಿಯನ್ನಾಳುವ ವಯಸ್ಸಿನವಳಲ್ಲ ವೈಷ್ಣವಿ. ಬುದ್ಧಿ ಭಾವವನ್ನು ಆಳುವ ವಯಸ್ಸು